| | | |
|---|---|---|
| **ಹೆಸರು:-..................................** | **ಸಾಫಲ್ಯ ಪರೀಕ್ಷೆ ಜೂನ್ 2019** | **9 ನೇ ತರಗತಿ** |
| **ಹಾ.ಸಂ:-...............** | **ವಿಷಯ:- ಪ್ರಥಮ ಭಾಷೆ ಕನ್ನಡ.** | ಅವಧಿ:- **40** ನಿ |

**1.** ಈ ಕೆಳಗಿನ ಪದಗಳಲ್ಲಿ ವಿಜಾತಿ ಒತ್ತಕ್ಷರ ಇರುವ ಪದವಿದು ;

[ಎ] ಹಬ್ಬ [ಬಿ] ಶಿಷ್ಯ [ಸಿ] ಬಟ್ಟೆ [ಡಿ] ಚಕ್ಕುಲಿ 1. ಉತ್ತರ:-.......................

2. ನೀನು ಉತ್ಸವಕ್ಕೆ ಹೋಗುವುದಿಲ್ಲವೇ ? - ಇಲ್ಲಿ ಬಳಸಿರುವ ಲೇಖನ ಚಿಹ್ನೆ ಇದು;

[ಎ] ಪ್ರಶ್ನಾರ್ಥಕ ಚಿಹ್ನೆ [ಬಿ] ವಿರಾಮ ಚಿಹ್ನೆ [ಸಿ] ವಾಕ್ಯವೇಷ್ಟನ ಚಿಹ್ನೆ [ಡಿ] ವಿವರಣ ಚಿಹ್ನೆ 2. ಉತ್ತರ:-.......................

3. ಉಪ್ಪಿಗಿಂತಲು ರುಚಿ ತಾಯಿಗಿಂತಲು ಬಂಧು

ಇಲ್ಲೆಂಬ ಗಾದೆನುಡಿ ಕೇಳಿರುವೆನು

ಗೆಳೆತನದ ಶುಚಿ-ರುಚಿ ಇದಕ್ಕೂ ಮಿಗಿಲಾಗಿಹುದು

ಎಂಬ ಸಾಹಸ ಮಾಡಿ ದೋಷವೇನು?

ಕಂಡ ಕಂಡವರೇನು ಬಲ್ಲರಿದನು

ಉಂಡವನು ಕಂಡಿಹನು ಇದರ ಹದನು.

ಈ ಮೇಲಿನ ಪದ್ಯ ಭಾಗದ ಸಾರಾಂಶದ ಅರ್ಥ;

[ಎ] ಗೆಳೆತನದ ಶ್ರೇಷ್ಠತೆ ಮತ್ತು ಮಹತ್ವ [ಬಿ] ಗೆಳೆತನದ ಸ್ವಾರ್ಥ ಮತ್ತು ವಂಚನೆ
[ಸಿ] ಗೆಳೆತನದಲ್ಲಿ ಮೇಲು-ಕೀಳು ಬೇದಭಾವ [ಡಿ] ಗೆಳೆತನದ ಸಣ್ಣತನ ಮತ್ತು ಸಂಕೋಚ 3. ಉತ್ತರ:-............................

* ಈ ಕೆಳಗಿನ ಗದ್ಯ ಭಾಗವನ್ನು ಓದಿಕೊಂಡು ಪ್ರಶ್ನೆ 4 ಕ್ಕೆ ಉತ್ತರಿಸಿ .

ಒಂದು ದಿನ ವಾಸಂತಿಕಾ ದೇವಾಲಯದ ಪೂಜೆಗೆಂದು ಹೋದ ಸಳ , ಸುದತ್ತ ಗುರುವಿನ ಬಳಿ ಉಪದೇಶ ಕೇಳುತ್ತಾ ಕುಳಿತಂದು, ಹುಲಿಯೊಂದು ಅವನೆಡೆಗೆ ಜಿಗಿದು ಬಂದಿತು. ಆಗ ಸುದತ್ತಮುನಿ ತನ್ನ ಕೈಯೊಳಗಿನ ಬೆತ್ತವನ್ನು ಸಳನೆಡೆಗೆ ಚಾಚಿ ಹೊಯ್ ಸಳ ಎಂದು ಆದೇಶವಿತ್ತನೆಂದೂ ಸಳ ಕೂಡಲೆ ಹುಲಿಯನ್ನು ಎದುರಿಸಿ ಅದರ ಗಂಟಲಲ್ಲಿ ಖಡ್ಗವನ್ನು ತುರಿಕೆ ಹುಲಿಯನ್ನು ಹೊಯ್ದನೆಂದೂ ತಿಳಿಯುವುದು.

4. ಈ ಮೇಲಿನ ಗದ್ಯಭಾಗದಲ್ಲಿ ಕನ್ನಡದ ಈ ರಾಜ ವಂಶ ಹುಟ್ಟಲು ಕಾರಣವಾದ ಪ್ರಸಂಗವಾಗಿದೆ;

[ಎ] ಕದಂಬ [ಬಿ] ಚಾಲುಕ್ಯ [ಸಿ] ಹೊಯ್ಸಳ [ಡಿ] ಗಂಗರು 4. ಉತ್ತರ:-........................

* ಈ ಕೆಳಗಿನ ಪದ್ಯಭಾಗ ಓದಿ, ಅರ್ಥೈಸಿ ಕೊಂಡು, ಪ್ರಶ್ನೆ ಸಂಖ್ಯೆ 5 ಮತ್ತು 6 ಕ್ಕೆ ಉತ್ತರಿಸಿ.

* ಪ್ರಜೆಯಂ ಪಾಲಿಸಬಲ್ಲೊಡಾತನರಸಂ ಕೈಯಾಸೆಯಂ ಮಾಡದಂ |
ನಿಜ ಮಂತ್ರೀಶ್ವರ ತಂದೆ-ತಾಯ ಸಲಹಲ್ ಬಲ್ಲಾತನೇ ಧಾರ್ಮಿಕಂ ||
ಭಜಕಂ ದೈವದ ಭಕ್ತಿಯುಳ್ಳೊಡೆ ಭಟಂ ನಿರ್ಭೀತ ತಾನಾದವಂ |
ದ್ವಿಜನಾಚರತೆಯುಳ್ಳವಂ ಹರಹರಾ ಶ್ರೀ ಚೆನ್ನ ಸೋಮೇಶ್ವರಾ||

5. ಕವಿಯ ಹೇಳಿದಂತೆ ಅರಸನ ಕರ್ತವ್ಯ ಇದು;

[ಎ] ಪ್ರಜೆಗಳ ರಕ್ಷಣೆ [ಬಿ] ಪ್ರಜೆಗಳ ಸುಲಿಗೆ [ಸಿ] ಪ್ರಜೆಗಳ ಭಕ್ಷಣೆ [ಡಿ] ಪ್ರಜೆಗಳ ಹಿಂಸೆ 5. ಉತ್ತರ:-............................

6. ಈ ಮೇಲಿನ ಪದ್ಯ ಭಾಗದಲ್ಲಿ ಕಂಡುಬರುವ ನೀತಿ ;

[ಎ] ಕರ್ತವ್ಯ ಪಾಲನೆ [ಬಿ] ಕರ್ತವ್ಯ ನಿರ್ಲಕ್ಷ್ಯ [ಸಿ] ಕರ್ತವ್ಯದ ಅಶಿಸ್ತು [ಡಿ] ಕರ್ತವ್ಯ ಲೋಪ 6. ಉತ್ತರ.............................

7. ಈ ಕೆಳಗಿನವುಗಳಲ್ಲಿ ಆಗಮ ಸಂಧಿಗೆ ಉದಾಹರಣೆಯಾದ ಪದ ಇದು;

[ಎ] ಚಳಿಗಾಲ [ಬಿ] ಗುರುವನ್ನು [ಸಿ] ಊರೂರು [ಡಿ] ಮೈದೊಳೆ 7. ಉತ್ತರ:-.....................

8. "ನನಗೆ ಈ **ಹಣವನ್ನು** ಯಾಕೆ ಕಳಿಸಿದ್ದಾರೆ ? ಈ ವಾಕ್ಯದಲ್ಲಿ ಅಡಿಗೆರೆ ಎಳೆದ ಪದದ ವಿಭಕ್ತಿ ಇದು;

[ಎ] ಪ್ರಥಮ [ಬಿ] ಪಂಚಮಿ [ಸಿ] ತೃತೀಯ [ಡಿ] ದ್ವಿತೀಯ 8. ಉತ್ತರ:-......................

9. ಈ ಕೆಳಗಿನವುಗಳಲ್ಲಿ ಅಂಕಿತನಾಮ ಪದವಿದು ;

[ಎ] ಕುಂಟ [ಬಿ] ಬೆಂಗಳೂರು [ಸಿ] ಕಾಡು [ಡಿ] ಶಿಕ್ಷಕ 9. ಉತ್ತರ:-......................

10. ನೇಸರು ಬಾನಿನ ನಡುನೆತ್ತಿಯಿಂದ ಈಚೆಗೆ ಪಡುವಣಕ್ಕೆ ತಿರುಗಿ ಎರಡು ತಾಸಾಗಿದೆ. - ಈ ವಾಕ್ಯದಲ್ಲಿರುವ ದಿಗ್ವಾಚಕ ಪದ ಇದು;

[ಎ] ಬಾನಿನ [ಬಿ] ಎರಡು [ಸಿ] ಪಡುವಣ [ಡಿ]. ನೇಸರು 10. ಉತ್ತರ:-......................

11. " ನಾನು ಇರುತ್ತೇನೆ, **<u>ನೀನು</u>** ಹೋಗಿ ಬಾ" - ಈ ವಾಕ್ಯದಲ್ಲಿ **' <u>ನೀನು</u>** ' ಪದದ ಸರ್ವನಾಮದ ಹೆಸರು;

[ಎ] ಉತ್ತಮ ಪುರುಷ [ಬಿ] ಮಧ್ಯಮ ಪುರುಷ [ಸಿ] ಪ್ರಥಮ ಪುರುಷ [ಡಿ] ಅನ್ಯ ಪುರುಷ 11. ಉತ್ತರ:-......................

12. "ರಾಜ" ಪದದ ಸ್ತ್ರೀಲಿಂಗ ರೂಪ ಇದು ;

[ಎ] ಹುಡುಗಿ [ಬಿ] ಕುಮಾರಿ [ಸಿ] ರಾಣಿ [ಡಿ] ಗಾಯಕಿ 12. ಉತ್ತರ:-......................

13. ಅಮ್ಮನ ಚಿನ್ನದ ಸರವನ್ನು ತಂದಿದ್ದೇನೆ. - ಈ ವಾಕ್ಯದಲ್ಲಿರುವ ಕ್ರಿಯಾಪದ ಇದು;

[ಎ] ಚಿನ್ನದ ಸರ [ಬಿ] ಅಮ್ಮನ [ಸಿ] ತಂದಿದ್ದೇನೆ [ಡಿ] ಅನ್ನು 13. ಉತ್ತರ:-......................

14. 'ಸ್ವರ್ಗ' ಪದದ ವಿರುದ್ಧಾರ್ಥಕ ಪದವಿದು;

[ಎ] ಕೈಲಾಸ [ಬಿ] ಆಕಾಶ [ಸಿ] ನರಕ [ಡಿ] ನಾಕ 14. ಉತ್ತರ:-......................

15.' ಪ್ರಾಣ' ಪದದ ತದ್ಭವ ರೂಪ ಇದು;

[ಎ] ಅರಣ [ಬಿ] ಹರಣ [ಸಿ] ವರುಣ [ಡಿ] ಪರಣ 15. ಉತ್ತರ:-......................

16. ' ಸ್ಯಾಂಡ್ವಿಚ್ ' ಪದವು ಈ ಭಾಷೆಯ ಪದವಾಗಿದೆ; ;

[ಎ] ಹಿಂದಿ [ಬಿ] ಇಂಗ್ಲೀಷ್ [ಸಿ] ಕನ್ನಡ [ಡಿ] ಉರ್ದು 16. ಉತ್ತರ:-......................

17. ಕಾಯಕ ಮಹತ್ವ ಸಾರುವ ಗಾದೆ ಇದು ;

[ಎ] ಕಾಸಿದ್ದರೆ ಕೈಲಾಸ [ಬಿ] ಕಾರಿದ್ದರೆ ಕೈಲಾಸ
[ಸಿ ] ಕಾಯಕವೇ ಕೈಲಾಸ [ಡಿ] ಕಣ್ಣಿದ್ದರೆ ಕೈಲಾಸ 17. ಉತ್ತರ:-......................

18. ತಾಯಿಗೆ ಪತ್ರ ಬರೆಯುವಾಗ ನಾವು ಅನುಸರಿಸುವ ಸಂಬೋಧನೆ ಇದು;

[ಎ] ಮಾನ್ಯರೇ [ಬಿ] ನಲ್ಮೆಯ [ಸಿ] ಪೂಜ್ಯನೀಯ [ಡಿ] ಪ್ರೀತಿಯ 18. ಉತ್ತರ:-......................

19. "ಸೀತೆಯ ಮುಖ ಚಂದ್ರನಂತೆ ಅರಳಿತು" ಈ ವಾಕ್ಯದ ಅಲಂಕಾರದ ಹೆಸರು;

[ಎ] ರೂಪಕ [ಬಿ] ದೃಷ್ಟಾಂತ [ಸಿ] ಉತ್ಪ್ರೇಕ್ಷೆ [ಡಿ] ಉಪಮಾ 19. ಉತ್ತರ:-......................

20. **'ಕನ್ನಡ ಸಾಹಿತ್ಯ'** - ಈ ಪದಕ್ಕೆ ಪ್ರಸ್ತಾರ ಹಾಕಿದಾಗ ಬರುವ ಸರಿಯಾದ ರೂಪ;

[ಎ] U— — UUU [ಬಿ] — U — U UU [ಸಿ] — UU— —U [ಡಿ] U U — — U— 20. ಉತ್ತರ:-......................

| ಸಾಮರ್ಥ್ಯ > | 1 | | 2 | | 3 | | 4 | 5 | 6 | | | 7 | 8 | 9 | | | 10 | | 11 | 12 |
|---|---|---|---|---|---|---|---|---|---|---|---|---|---|---|---|---|---|---|---|---|
| ಶ್ರೇಣಿ | | | | | | | | | | | | | | | | | | | | |
| ಪ್ರಶ್ನೆಸಂಖ್ಯೆ > | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 | 20 |
| ಉತ್ತರಶ್ರೇಣಿ> | | | | | | | | | | | | | | | | | | | | |